ಮೊದಲಾದವರ ಮನಸ್ಸನ್ನು ಕೂಡ ಅಪಹರಿಸಿದಳು. ಇನ್ನೂ ಮೈನೆರೆಯದ ಹಾಫಿಜಾ ತವರು ಮನೆ ಮತ್ತು ಗಂಡನ ಮನೆಯ ಓಡಾಟದಲ್ಲಿಯೇ ಒಂದು ಇಡೀ ವರ್ಷವನ್ನು ಕಳೆದಿದ್ದಳು. ಅಂದು ಹಯಾತ್ ಸಾಹೇಬರ ಕುಟುಂಬಕ್ಕೆ ಅತ್ಯಂತ ಸಂಭ್ರಮದ ದಿನ. ಅಬ್ಬೂರು ಮಾಚಗೋಡನಹಳ್ಳಿಯಿಂದ ಆಳೊಬ್ಬ ಬಂದಿದ್ದ. ಸಂಜೆಯ ವೇಳೆಗೆ ಹಾಸನವನ್ನು ತಲುಪಿದ್ದ ಆತ ಹಾಫಿಜಾ ಮೈನೆರೆದಿದ್ದ ಸುದ್ದಿಯನ್ನು ಹೊತ್ತು ತಂದಿದ್ದ. ಹಯಾತ್ ಸಾಹೇಬರ ವಿಶಾಲವಾದ ಮಹಡಿ ಮನೆಯ ಉದ್ದಗಲಕ್ಕೂ ಅರಳುತ್ತಿದ್ದ ದೊಡ್ಡ ದೊಡ್ಡ ಗಾಜಿನ ಬಿರಡೆಯ ಕಂದೀಲುಗಳು ಅಂದು ವಿಶೇಷ ಪ್ರಭೆಯನ್ನು ಬೀರುತ್ತಿದ್ದವು. ಅಂತೆಯೇ ಅವಕುಂಠನವನ್ನು ಹೊದ್ದು ಮೆಲು ಹೆಜ್ಜೆಯೊಡನೆ ಒಂದೆರಡು ತಿಂಗಳಿನಲ್ಲಿಯೇ ಹಾಫಿಜಾ ಪತಿಗೃಹವನ್ನು ಸೇರಿ ಆ ಮನೆಯ ಸಡಗರವನ್ನು ಇನ್ನಷ್ಟು ಬೆಳಗಿದಳು.

ನನ್ನ ನಾನಾ ಹಯಾತ್ ಸಾಹೇಬರು ಕಷ್ಟಜೀವಿ. ತಂದೆಯ ಅಕಾಲ ಸಾವಿನಿಂದ ಅನಾಥವಾಗಿದ್ದ ತಮ್ಮ ದೊಡ್ಡ ಕುಟುಂಬವನ್ನು ಸಲಹುವ ಜವಾಬುದಾರಿ ಅವರ ಮೇಲೆ ಇತ್ತು. ಮೂವರು ಸಹೋದರಿಯರು ಮತ್ತು ಒಬ್ಬ ತಮ್ಮ ಹಾಗೂ ವಿಧವೆ ತಾಯಿ ಅವರ ಬೆನ್ನಿಗಿದ್ದರು. ಹೀಗಾಗಿ ಅವರು ಬೇಸಾಯದ ಜೊತೆಯಲ್ಲಿ ವ್ಯಾಪಾರವನ್ನು ಕೂಡಾ ಅವಲಂಬಿಸಿದ್ದರು. ಆಯಾ ಸೀಜನ್ನಿನ ಹಣ್ಣುಗಳ ಮಾರಾಟ ಕೂಡಾ ಅವರ ಮುಖ್ಯ ಕಸುಬಾಗಿತ್ತು. ಮಲೆನಾಡಿನ ಕಾಫಿ



ಚಿತ್ರ: ರಂಜು ಪಿ.

ತೋಟಗಳಿಂದ ಕಿತ್ತಳೆ ಹಣ್ಣನ್ನು ಖರೀದಿಸಿ ಹುಬ್ಬಳ್ಳಿಗೆ ಮಾರಾಟಕ್ಕೆ ಎತ್ತಿನ ಗಾಡಿಗಳಲ್ಲಿ ಕೊಂಡೊಯ್ಯುತ್ತಿದ್ದರು. ಒಟ್ಟಿಗೆ ಅನೇಕ ಗಾಡಿಗಳು ಹುಬ್ಬಳ್ಳಿಗೆ ಹೋಗುತ್ತಿದ್ದವು. ಹಣ್ಣಿನ ವ್ಯಾಪಾರಕ್ಕಾಗಿ ಈ ಹಿಂದೆ ಅನೇಕ ಬಾರಿ ಅವರು ಹುಬ್ಬಳ್ಳಿಗೆ ಪ್ರಯಾಣ ಬೆಳೆಸಿದ್ದರು. ಅವರೆಲ್ಲರೂ ಸೀಸನ್ನಿಗೆ ತಕ್ಕ ಹಣ್ಣಿನ ವ್ಯಾಪಾರವನ್ನು ಮಾಡುತ್ತಿದ್ದರು. ಸುತ್ತಲಿನ ಸಕಲೇಶಪುರ, ಬೇಲೂರು ಕಡೆಯ ತೋಟದ ಕಿತ್ತಲೆ ಹಣ್ಣುಗಳನ್ನು ಗುತ್ತಿಗೆ ಪಡೆದಿದ್ದರು. ಬೇಡಿಕೆ ಇದ್ದ ಊರುಗಳಲ್ಲಿ ಮಾರಾಟ ಮಾಡುವುದು ಅವರ ವೃತ್ತಿಯಾಗಿತ್ತು.

ಆ ದಿನ ಸೂರ್ಯ ಅಸ್ತಮಿಸುತ್ತಿದ್ದಂತೆಯೇ ನಾನಾ ಸಾಹೇಬರ ಮನೆಯಲ್ಲಿ ವಿಶೇಷ ಚಟುವಟಿಕೆ ಆರಂಭವಾಗಿತ್ತು. ಬೇಗ ಬೇಗ ರಾತ್ರೆಯ ಊಟ ಮುಗಿಸಿ ಸಯ್ಯದ್ ಗಫಾರ್ ಹೊರ ಬಂದಾಗ ಎದುರಿಗೆ ಸಾಲಾಗಿ ಸುಮಾರು ಇಪ್ಪತ್ತು ಗಾಡಿಗಳು ನಿಂತಿದ್ದವು. ಗಾಡಿಗಳ ತುಂಬಾ ಕಿತ್ತಲೆ ಹಣ್ಣುಗಳು. ಗಾಡಿಗೆ ಮಜಬೂತಾದ ಎತ್ತುಗಳನ್ನು ಕಟ್ಟುವುದು, ಗಾಡಿಗಳ ಮುಂಭಾಗದಲ್ಲಿ ಲಾಂದ್ರ ತೂಗುವ ಹಾಗೆ ಕಟ್ಟುವುದರಿಂದ ಹಿಡಿದು ಮತ್ತಿತರೆ ಎಲ್ಲಾ ಸಿದ್ಧತೆಗಳು ನಡೆಯುತ್ತಿದ್ದವು. ಸಯ್ಯದ್ ಗಫಾರ್ ಊಟ ಮುಗಿಸಿ ಮನೆಯವರಿಂದ ಮತ್ತು ಎಳೆ ಹರೆಯದ ಪತ್ನಿಯಿಂದ ಬೀಳ್ಕೊಂಡು ಬರುವವರೆಗೆ ನಾನಾ ಸಾಹೇಬರು ಗಾಡಿಯ ಬಳಿ ನಿಂತಿದ್ದರು. ಒಂದು ಗಾಡಿಯಲ್ಲಿ ಕೃಷಿ ಮತ್ತಿತರೆ ಚಟುವಟಿಕೆಗಳಲ್ಲಿ ನಾನಾ ಸಾಹೇಬರಿಗೆ ನೆರವಾಗುತ್ತಿದ್ದ ಕೋಲಾ ಎಂಬ ಅಡ್ಡ ಹೆಸರಿನ ಯುವಕ ಆಸೀನನಾಗಿದ್ದ. ಊಟ ಮಾಡಿ ಬಂದ ಸಯ್ಯದ್ ಗಫಾರ್ ತನ್ನ ಗಾಡಿಯ ಮೇಲೇರಿದ. ಸಾಲಾಗಿ ಇಪ್ಪತ್ತು ಗಾಡಿಗಳು ಒಂದರ ಹಿಂದೆ ಒಂದು ಪ್ರಯಾಣ ಬೆಳೆಸಿದವು. ಹಾಸನದಿಂದ ಸುಮಾರು ನಾಲ್ಕೈದು ಕಿಲೋಮೀಟರ್ ದೂರದವರೆಗೂ ಎಚ್ಚರವಾಗಿದ್ದ ಗಾಡಿಯ ಸವಾರರು ಕ್ರಮೇಣ ಒಬ್ಬೊಬ್ಬರಾಗಿ ತಮ್ಮೊಡನೆ ಇದ್ದ ಕಂಬಳಿಯನ್ನು ಸುತ್ತಿಕೊಂಡು ಹಣ್ಣಿನ ರಾಶಿಯಲ್ಲೇ ಒಂದಿಷ್ಟು ಜಾಗ ಮಾಡಿಕೊಂಡು ಉರುಳಿಕೊಂಡರು. ಎತ್ತುಗಳಿಗೆ ಚಿರಪರಿಚಿತ ದಾರಿಯಾದ್ದರಿಂದ ಅವು ಮುಂದೆ ಸರಾಗವಾಗಿ ಹೆಜ್ಜೆ ಇಡತೊಡಗಿದವು. ಹಗಲಿನ ಬಿಸಿಲು ಬೇಗೆಯ ಪ್ರಯಾಣಕ್ಕಿಂತ ರಾತ್ರಿ ಹೊತ್ತಿನ ಪ್ರಯಾಣ ಸುಖಕರವಾಗಿತ್ತು. ಆಕಾಶದ ತುಂಬೆಲ್ಲಾ ನಕ್ಷತ್ರಗಳು